ಸೇಡಂ ನಗರದ ಆಸ್ಪತ್ರೆಯ ಔಷಧಿಗಳಿಗಾಗಿ ಮಂಜೂರು ಮಾಡುವ ಹಣ

2726 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಚಿಕಿತ್ಸೆ ಪಡೆಯುತ್ತಿರುವ ಹೊರ ರೋಗಿಗಳ ಮತ್ತು ಒಳರೋಗಿಗಳ ಸಂಖ್ಯೆ ಎಷ್ಟು?

ಆ) ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಔಷಧಿಗಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು? ಹಾಗೂ ಈ ಔಷಧಿಗಳನ್ನು ಖರೀದಿ ಮಾಡುವವರು ಜಿಲ್ಲಾ ಪರಿಷತ್ತಿನವರೋ ಅಥವಾ ಸರ್ಕಾರದವರೋ?

ಇ) ಸರ್ಕಾರದ ಔಷಧಿಗಳಿಗಾಗಿ ಮಂಜೂರು ಮಾಡುವ ಹಣವು ಪ್ರತಿ ತಿಂಗಳು ಚಿಕಿತ್ಸೆ ಪಡೆಯುವ ರೋಗಿಗಳಿಗೆ ಸಕಾಗುವುದೇ?

ಈ) ಒಂದು ವೇಳೆ ಸಾಕಾದ ಪಕ್ಷದಲ್ಲಿ ಬಡ ರೋಗಿಗಳ ಆರೋಗ್ಯಕ್ಕಾಗಿ ಸರ್ಕಾರವು ಮಾಡುವ ವ್ಯವಸ್ಥೆಯೇನು? ಹಾಗೂ ಎಂದಿನಿಂದ ಮಾಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೊರ ರೋಗಿಗಳು - 3638

ಒಳ ರೋಗಿಗಳು - 69

ಆ) ಪ್ರತಿ ತಿಂಗಳು ಈ ಆಸ್ಪತ್ರೆಯಲ್ಲಿ ಔಷಧಿಗಾಗಿ ಸರಾಸರಿ ರೂ. 9000 ಹಣ ಖರ್ಚು ಮಾಡಲಾಗುತ್ತಿದೆ. 90-91ನೇ ಸಾಲಿನಲ್ಲಿ ಜಿಲ್ಲಾ ಪರಿಷತ್‌ನಿಂದ ಔಷಧಿ ಖರೀದಿಸಲಾಗಿದೆ. ಈ ಸಾಲಿನಲ್ಲಿ ಶೇಕಡಾ 60ರಷ್ಟು ಸರ್ಕಾರದಿಂದಲೂ ಶೇಕಡಾ 40ರಷ್ಟು ಜಿಲ್ಲಾ ಪರಿಷತ್‌ನಿಂದಲೂ ಖರೀದಿ ಮಾಡಲಾಗುವುದು.

ಇ) ಇಲ್ಲ.

ಈ) ಅವಶ್ಯಕತೆ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರು ಅಂದಾಜು ಮಾಡಿದ್ದು, ಆ ಆಧಾರದ ಮೇಲೆ ಆಯವ್ಯಯದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ ಹೆಚ್ಚಿಗೆ ಹಣವನ್ನು ಒದಗಿಸಲಾಗುವುದು.

ಚಂಚೋಳಿ ತಾಲ್ಲೂಕಿನ ಏರಾಣ್ಯ ಗ್ರಾಮದ ಗೈರಾಣ ಭೂಮಿಯಲ್ಲಿ ರೈತರು ಉಪಯೋಗಿಸುವ ಹಾದಿಯನ್ನು ಗುತ್ತಿಗೆ ನೀಡಿದ ಬಗ್ಗೆ.

3718 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸರ್ಕಾರಿ ಗೈರಾಣ ಭೂಮಿ ಶಹಾಬಾದ ಗಣಿಗಳ ಪರ್ಸಿ ತೆಗೆಯಲು ಕಾನೂನು ಪ್ರಕಾರ 4 ಎಕರೆ 37 ಗುಂಟೆಗಿಂತಲೂ ಹೆಚ್ಚು ಗುತ್ತಿಗೆ ಮಂಜೂರು ಮಾಡಲು ನಿರ್ಬಂಧವಿದೆಯೇ?

ಆ) ಭೂಮಿತಿ ಹಿಡುವಳಿ ತಕ್ಕಮಿತಿಯಲ್ಲಿ ಭೂಮಿ ಇದ್ದರೆ ಅವರಿಗೆ ಪುನಃ ಹೆಚ್ಚಿನ ಭೂಮಿ ಗುತ್ತಿಗೆ ಆಧಾರದ ಮೇಲೆ ಕೊಡಬಹುದೇ?

ಇ) ಸರ್ಕಾರಿ ಗೈರಾಣ ಭೂಮಿಯಲ್ಲಿ ರೈತರಿಗೆ ಅವರ ಎತ್ತು ಬಂಡಿಗಳನ್ನು ಹೊಗಿ ಬರಲು ಪುರಾತನ ಕಾಲದಿಂದ ಹಾದಿ ಇದ್ದರೆ ಆ ಹಾದಿಯನ್ನು ಕಡೆಗಣಿಸಿ ಗುತ್ತಿಗೆ ಆಧಾರದ ಮೇಲೆ ಕೊಡಬಹುದೇ?